ವಿಷಯ : ಆಶ್ರಯ ಯೋಜನೆಯಲ್ಲಿ ಹಂಚಲಾದ ಮನೆಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 349(613)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೆ

ಅ) ಡಾ : ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರಿನಲ್ಲಿ ಇದುವರೆಗೆ ಎಷ್ಟು ಮನೆಗಳನ್ನು ಹಂಚಲಾಗಿದೆ

ಆ) ಆಶ್ರಯ ಯೋಜನೆಯಲ್ಲಿ ಇದುವರೆಗೆ ಹಂಚಿರುವ ಮನೆಗಳೆಷ್ಟು ಹಾಗೂ ನಿವೇಶನಗಳೆಷ್ಟು?

ಶ್ರೀ ಗೋಪಿನಾಥ್ ಆರ್.ಸಾಂಡ್ರಾ (ವಸತಿ ಸಚಿವರು) :

ಅ) ಡಾ : ಬಿ.ಆರ್ ಅಂಬೇಡ್ಕರ್‌ರವರ ಜನ್ಮ ಶತಮಾನ ಯೋಜನೆ ಹೆಸರಿನಲ್ಲಿ ಇದುವರೆಗೆ ಹಂಚಲಾದ ಮನೆಗಳು 18,459.

ಆ) ಆಶ್ರಯ ಯೋಜನೆಯಲ್ಲಿ ಇದುವರೆಗೆ ಹಂಚಿರುವ ಮನೆಗಳು 56,317 ನೀವೇಶನಗಳು 7,42,404.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಅಂಗನವಾಡಿ ಶಾಲೆಯ ಶಿಕ್ಷಕಿಯರ ಸಂಖ್ಯೆ

ಚುಕ್ಕೆ ಗುರಿತಿಲ್ಲದ ಪ್ರಶ್ನೆ ಸಂಖ್ಯೆ 350(5೯9)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಅಂಗನವಾಡಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕಿಯರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಇವರುಗಳು ಪಡೆಯುತ್ತಿರುವ ಮಾಸಿಕ ಸಂಬಳ ಭತ್ಯೆಯ ವಿವರಗಳೇನು

ಇ) ಅವರ ಇತರ ಬೇಡಿಕೆಗಳು ಸರ್ಕಾರದ ಮುಂದಿದೆಯೇ ಇದ್ದಲ್ಲಿ ಬೇಡಿಕೆಯ ವಿವರಗಳೇನು ಹಾಗೂ ಎಂದು ಪೂರೈಸಲಾಗುವುದು?

ಶ್ರೀಮತಿ ಮನೋರಮ ಮಧ್ವರಾಜ್ (ಮಹಿಳಾ ಮತ್ತು ಶಿಶು ಅಬಿವೃದ್ಧಿ ಸಚಿವರು)

ಅ) 2098 ಅಂಗನವಾಡಿ ಕಾರ್ಯಕರ್ತೆಯರು (ತಾಲ್ಲೂಕುವಾರು ವಿವರ ಅನುಬಂಧ-(ಎ)ರಲ್ಲಿ ಒದಗಿಸಿದೆ).

ಆ) ಅಂಗನವಾಡಿ ಕಾಯ್ಕರ್ತೆಯರಿಗೆ ಅವರ ಅರ್ಹತೆ ಹಾಗು ಅನುಭವದ ಆಧಾರದ ಮೇಲೆ ಮಾಸಿಕ ರೂ.350 ರಿಂದ 450 ರವರೆಗೆ ಗೌರವಧನ ಕೊಡಲಾಗುತ್ತದೆ. (ವಿವರಗಳನ್ನು ಅನುಬಂಧ-1(ಡಿ) ರಲ್ಲಿ ಒದಗಿಸಿದೆ).

ಇ) ಹೌದು, ಬೇಡಿಕೆಯ ವಿವರಗಳನ್ನು ಅನುಬಂಧ-2ರಲ್ಲಿ ಕೊಡಲಾಗಿದೆ. ಕೆಲವು ಬೇಡಿಕೆಗಳನ್ನು ಪೂರೈಸಲಾಗಿದೆ. ಮತ್ತು ಕೆಲವು ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.